(ಇಂದು ದಿನಾಂಕಃ **20-05-2019** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ ಃ-**

**1.** ಚಾ.ಸಾ. 1 ರವರು ಕುಮಟಾದ ಗುಜರಗಲ್ಲಿಯಲ್ಲಿ ವಾಸವಿದ್ದಾರೆ. ನಾನು ಕಿಮಾನಿಯಲ್ಲಿ ವಾಸವಿದ್ದೇನೆ. ಕಿಮಾನಿ ಮತ್ತು ಗುಜರಗಲ್ಲಿಯ ನಡುವೆ ಅಂದಾಜು 15 ಕಿ.ಮೀ. ಅಂತರವಿದೆ. ಚಾ.ಸಾ.1 ರವರು ದೂರು ಸಲ್ಲಿಸಿದ ದಿನಾಂಕ ಹೇಳಲು ಬರುವುದಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿಲ್ಲ. ನನ್ನ ಅಣ್ಣ ವಿದ್ಯಾಧರ ಒಟ್ಟೂ 85,000-00 ವನ್ನು ನೀಡಿದ್ದನು ಎಂದು ವಿಷಯ ತಿಳಿಯಿತು ಎಂದು ನಾನು ಈಗ ಓದಿ ಹೇಳಿದಂತೆ ನಿ.ಡಿ. 1 ರಂತೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ಮುಂದುವರೆದು ನಾನು ಪೊಲೀಸರಿಗೆ ಯಾವುದೇ ರೀತಿ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸರ ಬಳಿ ಅಳ್ವೆಕೋಡಿಯಲ್ಲಿ ವಾಸವಿದ್ದ ಬಗ್ಗೆ ಹೇಳಿರುವುದಿಲ್ಲ. ನನ್ನ ತಂದೆ ಕೂಡ ಕಿಮಾನಿಯಲ್ಲಿ ವಾಸವಿದ್ದಾರೆ. ನನ್ನ ತಂದೆ ಬಂಗಾರವನ್ನು



ಅಡವಿಟ್ಟು ರೂ. 35,000-00 ವನ್ನು 1ನೇ ಆರೋಪಿತೆಗೆ ನೀಡಿರುತ್ತಾರೆ. ನನ್ನ ತಂದೆ ರೂ. 35,000-00 ವನ್ನು ಮನೆಯಲ್ಲಿ ಪಾವತಿ ಮಾಡಿರುತ್ತಾರೆ. ನನ್ನ ಅಣ್ಣ ರೂ. 25,000-00 ದ ಚೆಕ್‌ನ್ನು ಕುಮಟಾದಲ್ಲಿ ಪಾವತಿ ಮಾಡಿರುತ್ತಾನೆ. ಕಳೆದ 7 ವರ್ಷಗಳಿಂದ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ. ನನ್ನ ತಂದೆ ಮತ್ತು ನನ್ನ ಅಣ್ಣ ವಿದ್ಯಾಧರ ಕಿಮಾನಿಯಲ್ಲಿನ ನಮ್ಮ ಮೂಲ ಮನೆಯಲ್ಲಿ ವಾಸವಿದ್ದಾರೆ. ನನ್ನ ತವರುಮನೆ ಮತ್ತು ನನ್ನ ಗಂಡನ ಮನೆಗೆ ಅಂದಾಜು 15 ಕಿ.ಮೀ. ಅಂತರ ಇದೆ. ನನ್ನ ತಂದೆ ಹಣ ಪಾವತಿ ಮಾಡುವ ಸಮಯ ನಾನು ನನ್ನ ತಂದೆಯ ಮನೆಯಲ್ಲಿದ್ದೆನು. ನನ್ನ ತಂದೆ ಯಾವ ಮುಖಬೆಲೆಯ ನೋಟುಗಳಲ್ಲಿ ಹಣ ಪಾವತಿ ಮಾಡಿದ್ದರು ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಹಣ ಪಾವತಿ ಮಾಡುವ ಸಮಯ ನನ್ನ ತಂದೆ ನಾಗಪ್ಪ, ತಾಯಿ ಲಕ್ಷ್ಮೀ, ಅಣ್ಣ ಚಾ.ಸಾ. 9 ಮತ್ತು ನಾನು ಹಾಜರಿದ್ದೆವು. ಸದ್ರಿ

ದಿನಾಂಕ ಮತ್ತು ಸಮಯ ಹೇಳಲು ಬರುವುದಿಲ್ಲ. 2009 ರಲ್ಲಿ ಪಾವತಿ ಮಾಡಿರುತ್ತೇವೆ. ಸದ್ರಿ ಸಮಯ ನನಗೆ ಮದುವೆಯಾಗಿರಲಿಲ್ಲ.

**2.** ಚಾ.ಸಾ. 9 ಕುಮಟಾದಲ್ಲಿ ಚೆಕ್ ನೀಡುವ ಸಮಯ ನಾನೂ ಕೂಡ ಆತನ ಜೊತೆ ಇದ್ದೆನು. ಆತ ಕುಮಟಾ ಬಸ್‌ನಿಲ್ದಾಣದ ಬಳಿ ಆರೋಪಿತರಿಗೆ ಚೆಕ್ ಹಸ್ತಾಂತರ ಮಾಡಿರುತ್ತಾನೆ. ಸದ್ರಿ ಚೆಕ್ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನದಾಗಿತ್ತು. ಸದ್ರಿ ಬ್ಯಾಂಕ್‌ನ ಶಾಖೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿತ್ತು ಎಂದು ನನಗೆ ಹೇಳಲು ನೆನಪಿಲ್ಲ. ಮೊತ್ತ ನಮೂದು ಇದ್ದ ಬಗ್ಗೆ ನನಗೆ ಮಾಹಿತಿ ಇದೆ. ಅದರಲ್ಲಿ ಬರೆದ ದಿನಾಂಕ ನೆನಪಿಲ್ಲ.

**3.** ನಾನು ಎಫ್.ಡಿ.ಎ. ಪರೀಕ್ಷೆ ಹಾಲ್‌ಟಿಕೇಟ್‌ನ ಪ್ರತಿಯನ್ನು ನಾನು ಇದಕ್ಕಿಂತ ಪೂರ್ವದಲ್ಲಿಯೇ 1ನೇ ಆರೋಪಿತೆಗೆ ನೀಡಿದ್ದೆನು. ಸದ್ರಿ ಪರೀಕ್ಷೆಯನ್ನು ಯಾವ ಅಧಿಸೂಚನೆಯಡಿ ನಿಗದಿಪಡಿಸಲಾಗಿತ್ತು ಎಂದು ನೆನಪಿಲ್ಲ. ನಾನು ಸದ್ರಿ ಹಾಲ್‌ಟಿಕೇಟ್‌ನ ಪ್ರತಿಯನ್ನು ಈ ತನಿಖಾ ಕಾಲದಲ್ಲಿ ನೋಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರಿಗೆ ಒಟ್ಟೂ ರೂ. 85,000-00 ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ 2009 ರಲ್ಲಿ ಯಾವುದೇ ಎಫ್.ಡಿ.ಎ. ಪರೀಕ್ಷೆ ಅಧಿಸೂಚನೆ ಹೊರಡಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಪರೀಕ್ಷೆಗೆ ಹಾಜರಾಗಿದ್ದೆನು. ಆರೋಪಿತರು ನೌಕರಿ ಕೊಡಿಸುವುದಾಗಿ ಯಾವುದೇ ಆಶ್ವಾಸನೆ ನೀಡಿರಲಿಲ್ಲ ಮತ್ತು ನಾವು ಚಾ.ಸಾ. 1 ರವರು ನೀಡಿದ ದೂರಿಗೆ ಸಹಕರಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ